ಎರಡನೇಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂಗಳ
ನ್ಯಾಯಾಲಯ, ಚಿಕ್ಕೋಡಿ

**8 ನೇ ಸಪ್ಟೆಂಬರ 2022**

**ಸಿ.ಸಿ.ನಂಃ 1228/2021**

ಪಿರ್ಯಾದಿಃ 1) ಕರ್ನಾಟಕ ಸರ್ಕಾರ
(ಖಡಕಲಾಟ ಪೋಲಿಸ ಠಾಣೆ )

ವಿರುದ್ಧ

ಆರೋಪಿಃ 1) ರುಕ್ಮೀಣಿ ಪ್ರಕಾಶ ನಾಯಿಕ,
ವಯಸ್ಸುಃ 56, ಉದ್ಯೋಗಃ ಹೊಲ ಮನೆ ಕಲಸ,
ಸಾಃ ನಾಗ್ಯಾನವಾಡಿ, ತಾಃ ಚಿಕ್ಕೊಡಿ,

2) ಮಲ್ಲಿಕಾರ್ಜುನ ಪ್ರಕಾಶ ನಾಯಿಕ,
ವಯಸ್ಸುಃ 26, ಉದ್ಯೋಗಃ ಒಕ್ಕಲುತನ,
ಸಾಃ ನಾಗ್ಯಾನವಾಡಿ, ತಾಃ ಚಿಕ್ಕೊಡಿ,

3) ವತ್ಸಲಾ ಉರ್ಫ ವಂದನಾ ರಾವಸಾಬ ನಾಯಿಕ,
ವಯಸ್ಸುಃ 37, ಉದ್ಯೋಗಃ ಮನೆಗೆಲಸ,
ಸಾಃ ಹೊನ್ನಿಹಳ್ಳಿ, ತಾಃ ಹುಕ್ಕೇರಿ,

## ದೋಷಾರೋಪಣೆ

ನಾನು ಶ್ರೀ.ನಾಗೇಶ ಪಾಟೀಲ, ಎರಡನೇಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳ ನಾಯಾಲಯ, ಚಿಕ್ಕೋಡಿ, ಆದ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಯನ್ನ ಹೊರೆಸುವುದೇನೆಂದರೆಃ

1) ಪಿರ್ಯಾದಿ ಮತ್ತು ಆರೋಪಿತರು ಅಕ್ಕಪಕ್ಕದ ಮನೆಯವರಿದ್ದು ಮೊದಲಿನಿಂದಲೂ ತಂಟೆ ತಕರಾರು ಇದ್ದು, ದಿನಾಂಕ 12-07-2021 ರಂದು 0900 ಗಂಟೆ ಸುಮಾರಿಗೆ ಖಡಕಲಾಟ ಪೋಲಿಸ ಠಾಣಾ ಹದ್ದಿ ಪೈಕಿ ನಾಗ್ಯಾನವಾಡಿ ಗ್ರಾಮದ ಹದ್ದಿಯಲ್ಲಿರುವ ಪಿರ್ಯಾದಿದಾರನ ಮನೆಯ ಮುಂದೆ, ಆರೋಪಿತರಾದ ನೀವುಗಳು ಸಂಗನಮತರಾಗಿ ತಂಟೆ ಮಾಡುವ ಉದ್ದೇಶದಿಂದ ಬಂದು ನಿಮ್ಮಗಳ ಪೈಕಿ 1 ನೇ ಆರೋಪಿತಳು ಒಂದು ಲಿಂಬೆ ಹಣ್ಣನ್ನು ಪಿರ್ಯಾದಿಯ ಮನೆಯ ಮುಂದೆ ಒಗೆದಿದ್ದಕ್ಕೆ ಪಿರ್ಯಾದಿಯ ಹೆಂಡತಿ ಚಾಸಾ-4 ಗೀತಾ ನಮ್ಮ ಮನೆಯ ಮುಂದೆ ಏಕೆ ಲಿಂಬೆ ಹಣ್ಣು ಒಗೆಯುತ್ತೀರಿ ಅಂತಾ ಕೇಳಿದ್ದಕ್ಕೆ ಸಿಟ್ಟಾಗಿ, ವಿನಾಕಾರಣ ತಂಟೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು,

ಭಾರತೀಯ ದಂಡ ಸಂಹಿತೆ ಕಲಂ 504 ಸಹಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ.

2) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ನೀವುಗಳು ಪಿರ್ಯಾದಿಯ ಹೆಂಡತಿ ಚಾಸಾ-4 ರವರ ಜೊತೆ ಮೇಲ್ಕಂಡಂತೆ ತಂಟೆ ಮಾಡಿ ಕೈಯಿಂದ ಹೊಡಿಬಡಿ ಮಾಡಿ ಸಾದಾ ಗಾಯಪಡಿಸಿ, ಭಾರತೀಯ ದಂಡ ಸಂಹಿತೆ ಕಲಂ 323 ಸಹಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ.

3) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ನೀವುಗಳು ಪಿರ್ಯಾದಿಯ ಹೆಂಡತಿ ಚಾಸಾ-4 ಗೀತಾ ಇವರ ಜೊತೆ ತಂಟೆ ಮಾಡಿ ಕೈಗಳಿಂದ ಹೊಡಿಬಡಿ ಮಾಡುತ್ತಿದ್ದಾಗ ಬಿಡಿಸಲು ಬಂದು ಪಿರ್ಯಾದಿಗೆ 2 ನೇ ಆರೋಪಿಯಾದ ನೀವು ಬಾಯಿಂದ ಎಡಗೈ ರಟ್ಟೆಗೆ ಕಚ್ಚಿ ಸಾದಾಗಾಯ ಪಡಿಸಿ, ಭಾರತೀಯ ದಂಡ ಸಂಹಿತೆ ಕಲಂ 324 ಸಹಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ.

4) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ನೀವುಗಳು ಪಿರ್ಯಾದಿಯ ಜೊತೆ ಮೇಲ್ಕಂಡಂತೆ ತಂಟೆ ಮಾಡಿ ಜೀವ ಬೆದರಿಕೆ ಹಾಕಿ ಭಾರತೀಯ ದಂಡ ಸಂಹಿತೆ ಕಲಂ 506 ಸಹಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ.

ಸದರಿ ಮೇಲ್ಕಂಡ ದೋಷಾರೋಪಣೆಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ ಮತ್ತು ಸದರಿ ದೋಷಾರೋಣೆಗಳಿಗಾಗಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗವುದು.

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ/ತರಿಗೆ ಕನ್ನಡ/ ಮರಾಠಿ/ ಹಿಂದಿ ಭಾಷೆಯಲ್ಲಿ ಓದಿ ಹೇಳಿ ನಂತರ ಆರೋಪಿ/ಗಳು ನೀಡಿದ ಉತ್ತರವನ್ನು ಯತಾವತ್ತಾಗಿ ಬರೆದುಕೊಂಡು ಸರಿಯಾಗಿದೆ ಎಂದು ದೃಢಿಕರಿಸಿದೆ.)

**2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.**